3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಪಟ್ಟಿ (ಎರಡನೇ ಪಟ್ಟಿ)

I ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೇ,

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಮೇರೆಗೆ:

1. ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು ಮಿನಿಸ್ಟೀರಿಯಲ್ ಸೇವೆಗಳು ಸೇರಿದಂತೆ (ನೇಮಕಾತಿ) ನಿಯಮಗಳು 1994ಕ್ಕೆ ತಿದ್ದುಪಡಿ ಮಾಡಿ ದಿನಾಂಕ 12.06.2001ರಂದು ಹೊರಡಿಸಲಾದ ಡಿಪಿಎಆರ್:40:ಎಸ್ಆರ್ಇ:2000ನೇ ಸಂಖ್ಯೆಯ ಅಧಿಸೂಚನೆ.

2. ಕರ್ನಾಟಕ ಕೃಷಿ ಸೇವೆಗಳು (ನೇಮಕಾತಿ) ನಿಯಮಗಳು 1999ಕ್ಕೆ ತಿದ್ದುಪಡಿ ಮಾಡಿ ದಿನಾಂಕ 21.07.2001ರಂದು ಹೊರಡಿಸಲಾದ ಡಿಎಆರ್:98:ಎಸ್ಆರ್ಇ:2000ನೇ ಸಂಖ್ಯೆಯ ಅಧಿಸೂಚನೆ.

1948ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ 61(3) ಮತ್ತು 69(5ಎ)ರ ಪ್ರಕರಣ ಹಾಗೂ 1957ರ ಕರ್ನಾಟಕ ವಿದ್ಯುಚ್ಛಕ್ತಿ (ಸರಬರಾಜು) ನಿಯಮಗಳು 75ರ ನಿಯಮದ ಮೇರೆಗೆ:

3. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ).

1999ರ ಕರ್ನಾಟಕ ವಿದ್ಯುಚ್ಛಕ್ತಿ ಅಧಿನಿಯಮದ ಅನುಸೂಚಿ ಭಾಗ-1ರ ಕಂಡಿಕೆ 5ರ ಮೇರೆಗೆ:

4. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

II ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಗೃಹ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೇ,

1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ 20ರ ಪ್ರಕರಣದ ಮೇರೆಗೆ:

ಭಾರತ ಮಕ್ಕಳ ಚಿತ್ರ ಸಂಸ್ಥೆ, ಚೆನ್ನೈ ಇವರು ಗದಗ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಸಹಯೋಗದಿಂದ ಮಕ್ಕಳ ಚಲನಚಿತ್ರಗಳನ್ನು ಬೆಳಗಿನ ವಿಶೇಷ ಪ್ರದರ್ಶನಗಳಲ್ಲಿ ಪ್ರದರ್ಶಿಸಲು ಕರ್ನಾಟಕ ಸಿನಿಮಾ(ನಿಯಂತ್ರಣ) ನಿಯಮ 1971ರ ಕಲಂ 41ಎಗೆ ವಿನಾಯಿತಿ ನೀಡಿ ದಿನಾಂಕ 06.07.2001ರಂದು ಹೊರಡಿಸಲಾದ

ಒಸಾಇ: 27: ಸಿಎನ್ ಎ: 2001ನೇ ಸಂಖ್ಯೆ ಅಧಿಸೂಚನೆಯನ್ನು ಮಂಡಿಸುತ್ತೇನೆ.

III ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆ 619 (ಎ)ರ ಪ್ರಕರಣದ ಮೇರೆಗೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತದ 1999-2000ನೇ ಸಾಲಿನ 2ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

IV ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆ 619(ಎ)ರ ಪ್ರಕರಣದ ಮೇರೆಗೆ,

1. ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ 1999-2000ನೇ ಸಾಲಿನ 26ನೇ ವಾರ್ಷಿಕ ವರದಿ (ಏಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ)

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 300(5)ರ ಪ್ರಕರಣದ ಮೇರೆಗೆ:

2. ಗದಗ್ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ (ಏಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ) ಗಳನ್ನು ಮಂಡಿಸುತ್ತೇನೆ.

V ಶ್ರೀ ಎ. ಎಂ. ಹಿಂಡಸಗೇರಿ (ಕಾರ್ಮಿಕ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೇ,

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ:

1. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

2. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ವರದಿ (ಏಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ).

3. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ (ಏಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ).

4. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ಲೆಕ್ಕ ತಪಾಸಣಾ ವರದಿ (ಏಳಂಬಕ್ಕೆ ಕಾರಣದ ಟಪ್ಪಣಿಯೊಂದಿಗೆ).

5. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ (ಏಳಂಬಕ್ಕೆ ಕಾರಣದ ಟಪ್ಪಣಿಯೊಂದಿಗೆ).

6. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿ.

7. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ಲೆಕ್ಕ ತಪಾಸಣಾ ವರದಿ (ಏಳಂಬಕ್ಕೆ ಕಾರಣದ ಟಪ್ಪಣಿಯೊಂದಿಗೆ).

8. ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

9. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 1998-99 ಮತ್ತು 1999-2000ನೇ ಸಾಲುಗಳ ಲೆಕ್ಕ ಪರಿಶೋಧನಾ ವರದಿ (ಏಳಂಬಕ್ಕೆ ಕಾರಣದ ಟಪ್ಪಣಿಯೊಂದಿಗೆ).

10. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ವರದಿ.

11. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VI ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆ 619(ಎ)ರ ಪ್ರಕರಣದ ಮೇರೆಗೆ,

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 1999-2000ನೇ ಸಾಲಿನ 36ನೇ ವಾರ್ಷಿಕ ವರದಿ (ಏಳಂಬಕ್ಕೆ ಕಾರಣದ ಟಪ್ಪಣಿಯೊಂದಿಗೆ) ಯನ್ನು ಮಂಡಿಸುತ್ತೇನೆ.

VII ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ,

1956ರ ಕರ್ನಾಟಕ ವಿಧಾನ ಮಂಡಲದ ಸದಸ್ಯರ ವೇತನ ವಿಶ್ರಾಂತಿ ವೇತನ ಮತ್ತು ಭತ್ಯೆಗಳ ಅಧಿನಿಯಮ 15(1ಎ) ಪ್ರಕರಣದ ಮೇರೆಗೆ:

1. 1957ರ ಕರ್ನಾಟಕ ವಿಧಾನಮಂಡಲ (ಸದಸ್ಯರ ಪ್ರಯಾಣ ಭತ್ಯೆ) ನಿಯಮಗಳು, ನಿಯಮ 10(1) ಮತ್ತು 10(2)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 10.07.2001ರಂದು ಹೊರಡಿಸಲಾದ ಲಪ- 1:26: ಎಂಎಲ್‌ಎ: ಎಲ್‌ಎ: 2001ನೇ ಸಂಖ್ಯೆ ಅಧಿಸೂಚನೆ.

2. 1.4.1998ನೇ ದಿನಾಂಕದ ಲಪ- 1:26: ಎಂಎಲ್‌ಎ: 98ನೇ ಸಂಖ್ಯೆಯ ಅಧಿಸೂಚನೆ- 1ರಲ್ಲಿ ಮಾನ್ಯ ಸದಸ್ಯರುಗಳ ಹಾಗೂ ಅವರ ಕುಟುಂಬದವರ ಚಿಕಿತ್ಸೆಗಾಗಿ ಪ್ರಕಟಿಸಿರುವ ಆಸ್ಪತ್ರೆಗಳ ಜೊತೆಗೆ ದಿನಾಂಕ:04.07.2001ರಿಂದ ಜಾರಿಗೆ ಬರುವಂತೆ ಕೆಲವು ಖಾಸಗಿ ಆಸ್ಪತ್ರೆಗಳನ್ನು ಸೇರ್ಪಡೆಗೊಳಿಸಿ ದಿನಾಂಕ: 10.07.2001ರಂದು ಹೊರಡಿಸಲಾದ ಲಪ- 1:26: ಎಂಎಲ್‌ಎ: ಎಲ್‌ಎ: 2001ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VIII ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಸಹಕಾರ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

1962ರ ಉಗ್ರಾಣ ನಿಗಮಗಳ ಕಾಯ್ದೆಯ 31(11)ರ ಪ್ರಕರಣದ ಮೇರೆಗೆ:

ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 1998-99 ಮತ್ತು 1999-2000ನೇ ಸಾಲುಗಳ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ) ಗಳನ್ನು ಮಂಡಿಸುತ್ತೇನೆ.

XI ಡಾ:ಜಿ.ಪರಮೇಶ್ವರ್(ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) ಅವರು:

1994ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ 28(3)ರ ಪ್ರಕರಣದ ಮೇರೆಗೆ,

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ಬೆಳಗಾವಿ) 1998-99ನೇ ಸಾಲಿನ ಲೆಕ್ಕ ತಪಾಸಣೆ ಹಾಗೂ ಅನುಸರಣಾ ವರದಿಯನ್ನು (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ) ಮಂಡಿಸುತ್ತೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು: ಮಾನ್ಯ ರಾಮದಾಸ್‌ರವರೆ, ನಾನು ಇದುವರೆಗೂ ನನ್ನ ಒಪ್ಪಿಗೆ ಕೊಟ್ಟಿಲ್ಲ. ನೀವು 3 ನಿಮಿಷದೊಳಗಾಗಿ ಮಾತನಾಡಿ ಮುಗಿಸಬೇಕು. ಈ ಅವಕಾಶವನ್ನು ನಾನು ನಿಮಗೆ ಕೊಡುತ್ತಿರುವುದು ನನ್ನ ಮನವೊಲಿಸುವುದಕ್ಕೆ ಮಾತ್ರ, ಅಷ್ಟರೊಳಗಡೆ ನೀವು ನಿಮ್ಮ ಮಾತನ್ನು ಮುಗಿಸಬೇಕು.